RNU AIR DHARWAD

# OCTOBER 30, 2025
# AKASHAVANI - DHARWAD
# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

'ಸಮತೋಲಿತ ಪೋಷಣೆ; ಆರೋಗ್ಯಯುತ ಜೀವನ', ಧ್ಯೇಯದೊಂದಿಗೆ, 8ನೇ ರಾಷ್ಟ್ರೀಯ ಪೋಷಣ ಮಾಸಿಕದಡಿ, ಜನ ಜಾಗೃತಿ ಅಭಿಯಾನಗಳು, ರಾಜ್ಯಾದ್ಯಂತ ಸಮಾರೋಪದ ಹಂತದಲ್ಲಿವೆ. 'ತಾಯಿ ಮತ್ತು ಮಗು ಆರೋಗ್ಯವಾಗಿದ್ದರೆ ಮಾತ್ರ, ಸುದೃಢ ದೇಶ ನಿರ್ಮಾಣ ಸಾಧ್ಯ ಎಂಬ ಗುರಿಯೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಪಿ.ಎಂ. ಪೋಷಣ್ ಅಭಿಯಾನದ ಮೂಲಕ, ತಾಯಿ ಮತ್ತು ಮಗುವಿನ ಆರೈಕೆಗೆ ಆದ್ಯತೆ ನೀಡಿದ್ದಾರೆ,' ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದ್ದಾರೆ. ಧಾರವಾಡ ಜಿಲ್ಲೆ, ಕುಂದಗೋಳದ, ಶ್ರೀ ಶಿವಾನಂದ ಮಠದಲ್ಲಿ, ಕೇಂದ್ರ ಸಂವಹನ ಇಲಾಖೆ, ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ, ಕೇಂದ್ರ ಸರ್ಕಾರದ ಹಲವು ಜನಪರ ಯೋಜನೆಗಳ, ಜನ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾನಾಡಿದರು.

<><><>

ಶಾಸಕ ಎಂ.ಆರ್.ಪಾಟೀಲ ಧ್ವನಿ 36 ಸೆಕೆಂಡುಗಳು

<><><>

'ಏಕ್ ಪೇಡ್, ಮಾ ಕೇ ನಾಮ್' ಅಭಿಯಾನ, ಆಯುಷ್ಮಾನ್ ಭಾರತ ಆರೋಗ್ಯ ಕಾರ್ಡ್ ಬಗ್ಗೆ, ಅಧಿಕಾರಿಗಳು ಗ್ರಾಮಸ್ಥರಿಗೆ ಮಾಹಿತಿ ನೀಡಿದರು.

<><><>

ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ, ಟೋಲ್-ಫ್ರೀ ಸಹಾಯವಾಣಿ ಸಂಖ್ಯೆ, 1-5-1-5, ನಾಡಿದ್ದು ನವೆಂಬರ್ 1 ರಿಂದ, ಹೊಸದಾಗಿ, ಕಾರ್ಯಾರಂಭ ಮಾಡಲಿದೆ. ಪೋ ಣ್ ಮತ್ತು ಪಿ.ಎಂ., ಎಂ.ವಿ.ವೈ.ಗೆ ಸಂಬಂಧಿಸಿದ ಪ್ರಶ್ನೆಗಳು ಹಾಗೂ ಮಾಹಿತಿ ಪಡೆಯಲು, ಏಕೀಕೃತ ಸಹಾಯವಾಣಿ 1-5-1-5 ಕಾರ್ಯನಿರ್ವಹಿಸಲಿದೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ನೈಋತ್ಯ ರೇಲ್ವೆ ಪ್ರಧಾನ ಕಚೇರಿಯ, ರೇಲ್ ಸೌಧದಲ್ಲಿ, 'ಜಾಗರೂಕತೆ ಜಾಗೃತಿ ಸಪ್ತಾಹ' ದ ಭಾಗವಾಗಿ, ಸಾರ್ವಜನಿಕ ಸಂಗ್ರಹಣೆ ನೈತಿಕ ಪದ್ಧತಿ ಹಾಗೂ ಸೈಬರ್ ಭದ್ರತೆ ಮತ್ತು ಸೈಬರ್ ನೈರ್ಮಲ್ಯದ ಕುರಿತು, ಜನ ಜಾಗೃತಿ ಅಧಿವೇಶನ ಜರುಗಿತು. "ಸಾರ್ವಜನಿಕ ಸಂಗ್ರಹಣೆ" ಕುರಿತು, ಭಾರತೀಯ ರೇಲ್ವೆ ಸಂಶೋಧನೆ, ಅಭಿವೃದ್ಧಿ, ವಿನ್ಯಾಸ ಹಾಗೂ ಗುಣಮಟ್ಟ ನಿಯಂತ್ರಣ ವಿಭಾಗ – ಆರ್.ಡಿ.ಎಸ್.ಓ. ನಿವೃತ್ತ ಮಹಾ ನಿರ್ದೇಶಕ, ವಿ. ರಾಮಚಂದ್ರನ್, ಭಾಗವಹಿಸಿ, ರೇಲ್ವೆಯ ಎಲ್ಲ ವಿಭಾಗದ ಅಧಿಕಾರಿಗಳು, ಸಾರ್ವಜನಿಕ ಲೆಕ್ಕ ಪರಿಶೋಧಕರಾಗಿ ಕಾರ್ಯನಿರ್ವಹಿಸುವಂತೆ, ಪ್ರತಿಯೊಂದು ಕ್ರಿಯೆಯಲ್ಲೂ, ನ್ಯಾಯ ಸಮ್ಮತತೆ ಮತ್ತು ಪ್ರಾಮಾಣಿಕತೆಯನ್ನು ಖಚಿತಪಡಿಸಿಕೊಳ್ಳಲು, ಮಾರ್ಗದರ್ಶನ ಮಾಡಿದರು.

<><><>

ನೈಋುತ್ಯ ರೇಲ್ವೆ, 'ವಿಜಿಲೆನ್ಸ್ ವೀಕ್' ಜನ ಜಾಗೃತಿ ಕಾರ್ಯಾಗಾರದಲ್ಲಿ, ವಿಶ್ರಾಂತ ಲೋಕಾಯುಕ್ತ ನ್ಯಾಯಮೂರ್ತಿ, ಎನ್. ಸಂತೋ ್ ಹೆಗ್ಡೆ ಪಾಲ್ಗೊಂಡು, ವಯಕ್ತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ, ಪ್ರಾಮಾಣಿಕತೆ ಬಗ್ಗೆ, ಸಂವಾದ ನಡೆಸಿದರು. ಹುಬ್ಬಳ್ಳಿಯ ನೈಋುತ್ಯ ರೇಲ್ವೆ ಪ್ರಧಾನ ಕಚೇರಿಯ, ರೇಲ್ ಸೌಧದಲ್ಲಿ ಮಾತನಾಡಿದ ಅವರು, ದುರಾಸೆ ಒಂದು ರೋಗ, ಮತ್ತು ಅದಕ್ಕೆ ಏಕೈಕ ಚಿಕಿತ್ಸೆ ಸಂತೃಪ್ತಿ; ನಿಜವಾದ ಸಂತೋ ್ ಮತ್ತು ಶಾಂತಿ, ಸಂಪತ್ತು ಅಥವಾ ಅಧಿಕಾರ ಸಂಗ್ರಹಣೆಯಿಂದಲ್ಲ; ಬದಲಾಗಿ, ತೃಪ್ತಿ ಮತ್ತು ನೈತಿಕ ಬಲದಿಂದ ಬರುತ್ತದೆ ಎಂದರು. ನೈಋುತ್ಯ ರೇಲ್ವೆ ಮಹಾ ಪ್ರಬಂಧಕ, ಮುಕುಲ್ ಸರನ್ ಮಾಥುರ್ ಪಾಲ್ಗೊಂಡಿದ್ದರು.

<><><>

2006–07 ರಲ್ಲಿ ಭಾಗ್ಯಲಕ್ಷ್ಮೀ ಯೋಜನೆಯಡಿ, ನೋಂದಣಿಯಾಗಿರುವ ಫಲಾನುಭವಿಗಳ, ಪರಿಪಕ್ವ ಮೊತ್ತವನ್ನು ಪಡೆಯಲು, ತಂತ್ರಾಂಶದಲ್ಲಿ ಹೆಸರು ನೋಂದಾಯಿಸಲು, ಇಂದು ಕೊನೆಯ ದಿನ. 18 ವ ್ ಪೂರ್ಣಗೊಂಡ ಫಲಾನುಭವಿ ಯುವತಿಯರು, ಪರಿಪಕ್ವ ಮೊತ್ತ ಪಡೆಯಲು, ಸಮೀಪದ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಗಳ ಕಚೇರಿಗೆ ತೆರಳಿ, ಮಾಹಿತಿ ಒದಗಿಸುವಂತೆ, ಕೋರಲಾಗಿದೆ.

<><><>

ಬಳ್ಳಾರಿ ಹಾಗೂ ಉಡುಪಿ ಜಿಲ್ಲೆಯಲ್ಲಿ, ಡಿಸೆಂಬರ್ 6ರ ವರೆಗೆ, ಮೂರನೇ ಆವೃತ್ತಿಯ 'ತಂಬಾಕು ಮುಕ್ತ ಯುವ ಅಭಿಯಾನ' ಆಯೋಜಿತವಾಗಿದೆ. ತಂಬಾಕು, ಗುಟಿಖಾ, ಸಿಗಾರೆಟ್, ಮದ್ಯ, ಮಾದಕ ವಸ್ತು ಸೇರಿದಂತೆ, ಇತರೆ ಮತ್ತು ಬರಿಸುವ ಪದಾರ್ಥಗಳಿಂದ, ಯುವಜನತೆ ದೂರವಿರುವಂತೆ, ಕೊಟ್ಪಾ ಕಾಯ್ದೆ ಅಡಿ, ಕಾರ್ಯಾಚರಣೆ ಹಾಗೂ ಜನ ಜಾಗೃತಿ ಆಯೋಜಿಸಿದೆ.

<><><>

ಮಕ್ಕಳ ರಕ್ಷಣಾ ಇಲಾಖೆಯ, ಬಳ್ಳಾರಿ ಜಿಲ್ಲೆ, ಕ್ಷಿಪ್ರ ಕಾರ್ಯಾಚರಣೆ ಪಡೆ, ವಿವಿಧೆಡೆ ದಾಳಿ ನಡೆಸಿ, ಮೂವರು ಬಾಲ ಕಾರ್ಮಿಕ ಮಕ್ಕಳನ್ನು ರಕ್ಷಿಸಿದೆ. ಉದ್ದಿಮೆಗಳ ಮಾಲಿಕರಿಗೆ, ಕರಪತ್ರಗಳ ಮೂಲಕ, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿಷೇಧದ ಕುರಿತು, ಜಾಗೃತಿ ಮೂಡಿಸಲಾಗುತ್ತಿದೆ.

<><><>

ವಿಜಯಪುರ ಜಿಲ್ಲೆಯ, 2 ಸಾವಿರದ 274 ಶಾಲೆಗಳ, 3 ಲಕ್ಷ 25 ಸಾವಿರದ 7 ಮಕ್ಕಳ ನೇತ್ರ ತಪಾಸಣೆ ನಡೆಸಿ, 9 ಸಾವಿರದ 7 ನೂರಾ 75 ಮಕ್ಕಳಿಗೆ, ಉಚಿತ ಕನ್ನಡಕ ಹಾಗೂ 87 ಮಕ್ಕಳಿಗೆ ನೇತ್ರ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಸಂಪತ ಗುಣಾರಿ ತಿಳಿಸಿದ್ದಾರೆ.

<><><>

ಮಂಗಳೂರಿನ ಊರ್ವ, ಒಳಾಂಗಣ ಕ್ರೀಡಾಂಗಣದಲ್ಲಿ, 'ಯೋನೆಕ್ಸ್, ಸನ್ ರೈಸ್ ಚೀಫ್ ಮಿನಿಸ್ಟರ್ಸ್, ಮಂಗಳೂರು ಇಂಡಿಯಾ ಇಂಟರ್ ನ್ಯಾ ್ನಲ್ ಚಾಲೆಂಜ್, ಬ್ಯಾಡ್ಮಿಂಟನ್ ಪಂದ್ಯಾವಳಿ', ನವೆಂಬರ್ 2ರ ವರೆಗೆ, ಆಯೋಜಿತವಾಗಿದೆ.

ಅಗ್ರ ಶ್ರೇಯಾಂಕದ, ಋತ್ವಿಕ್ ಸಂಜೀವ ಸತೀಶಕುಮಾರ, ಎಂಟನೇ ಶ್ರೇಯಾಂಕದ, ಸನೀತ್ ದಯಾನಂದ ಸೇರಿದಂತೆ, ಎಂಟು ಜನ ಬ್ಯಾಡ್ಮಿಂಟನ್ ಪಟುಗಳು, ಪುರುಷರ ಸಿಂಗಲ್ಸ್‌ನಲ್ಲಿ, ಪ್ರಿ ಕ್ವಾರ್ಟರ್ ಫೈನಲ್ ತಲುಪಿದ್ದಾರೆ.

<><><>

ಕೇಂದ್ರ ಪಿಂಚಣಿ ಮತ್ತು ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ, ನಾಡಿದ್ದು, ನವೆಂಬರ್ 1 ರಿಂದ, 30ರ ವರೆಗೆ, ಜೀವಿತ ಪ್ರಮಾಣ ಪತ್ರ, ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಸಲ್ಲಿಕೆ ಆಂದೋಲನ, ದೇಶಾದ್ಯಂತ ಆಯೋಜಿಸಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.